Literacy for a Billion

Movie: Munjaneya Manju
Year: 1993

Song: Kopana Madana
Lyricist: Hamsalekha

ಆ ಆ ಆ ಆ...
ಲಲ ಲಲ ಲಲ ಲಾಲಾ
ಜೀವನ ಸರಿಗಮಗಳ
ಅಲೆಗಳ ಮೇಲೆ
ನಗಿಸೋ ಅಳಿಸೋ
ಪ್ರಿಯನೋಲೆ
ದಿನವೂ ಹೊಸದೇ ಸಂದೇಶವಿದೆ
ದಿನವೂ ಹೊಸದೇ ಸಂದೇಶವಿದೆ
ಈ ಜೀವನ ಸರಿಗಮಗಳ
ಅಲೆಗಳ ಮೇಲೆ
ಅಳಿಸೋ ನಗಿಸೋ
ಪ್ರಿಯನೋಲೆ

ಆ ಆ ಆ ಆ ಆ ಆ..
ಹೂಂ ಹೂಂ ಹೂಂ
ಹೂಂ ಹೂಂ ಹೂಂ
ಹರಿದಾಡುವ ಮನದೋಣಿಗೆ
ಹರಿಗೋಲೆ ಅವನು
ಅವನ ನಿಯಮಾವಳಿಯೆ
ಸುಳಿದಾಡುವ ಸುಖ ಚಿಂತೆಯ
ಯಜಮಾನ ಅವನು
ಅವನ ಮಾಯಾವಳಿಯೆ
ನಗಲೂ ಕಂಬನಿ
ಅಳುವಾಗಲೂ ಕಂಬನಿ
ಸುಳ್ಳಿಗೂ ನಾಲಿಗೆ
ವೇದಾಂತಕೂ ನಾಲಿಗೆ
ಹಗಲಲ್ಲಿ ಇರುಳಾಗಿ
ಕಸದಲ್ಲಿ ರಸವಾಗಿ
ಉಳಿವನವನು
ಜೀವನ ಸರಿಗಮಗಳ
ಅಲೆಗಳ ಮೇಲೆ
ಅಳಿಸೋ ನಗಿಸೋ
ಪ್ರಿಯನೋಲೆ
ದಿನವೂ ಹೊಸದೇ ಸಂದೇಶವಿದೆ
ದಿನವೂ ಹೊಸದೇ ಸಂದೇಶವಿದೆ
ಈ ಜೀವನ ಸರಿಗಮಗಳ
ಅಲೆಗಳ ಮೇಲೆ
ನಗಿಸೋ ಅಳಿಸೋ
ಪ್ರಿಯನೋಲೆ

ಬರಗಾಲದ ಬೆನಲ್ಲಿಯೆ
ಮಳೆಗಾಲ
ಬಿರಿದ ನೆಲಕೆ
ಪಸೆಯಾಗಿರುವ
ಅತಿವೃಷ್ಟಿಯ ಅಡಿಯಲ್ಲಿ
ಅತಿಯಾಸೆ
ಜಗದ ಬದುಕೇ
ಉಸಿರಾಗಿಸುವ
ಒಂದೇ ಬಾಳು
ನಾನಾ ವಿಧ ದೆಶೆಗಳು

Literacy for a Billion

ಒಂದೇ ನಾಣ್ಯ
ಪೂರ್ವಾಪರ ಮುಖಗಳು
ಎದೆಯಲ್ಲಿ ಎದೆಯಾಗಿ
ವ್ಯಥೆಯಲ್ಲಿ ಕಥೆಯಾಗಿ
ಒಲವಾಗಿರುವ
ಜೀವನ ಸರಿಗಮಗಳ
ಅಲೆಗಳ ಮೇಲೆ

ಒಲವ ಚೆಲುವ ಕರೆಯೋಲೆ
ದಿನವೂ ಹೊಸದೇ ಸಂದೇಶವಿದೆ
ದಿನವೂ ಹೊಸದೇ ಸಂದೇಶವಿದೆ
ಈ ಜೀವನ ಸರಿಗಮಗಳ
ಅಲೆಗಳ ಮೇಲೆ
ಒಲವ ಚೆಲುವ ಕರೆಯೋಲೆ

Disclaimer: PlanetRead does not own these lyrics and is not using them for any commercial purpose. For over 20 years, PlanetRead has been subtitling Bollywood songs for mass literacy. These lyrics are being offered as part of PlanetRead's literacy development initiative.

PlanetRead is a tax-exempt, not-for-profit: 501(c) (3) in the United States and 80(G) in India.